ಅ) ಈ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಇ) ಈ ಹುದ್ದೆಗಳು ಖಾಲಿ ಇರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದಲ್ಲಿ ಇದಕ್ಕೆ ಸರ್ಕಾರದ ಕ್ರಮವೇನು?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) 9

ಶಾಲಾವಾರು ವಿವರ ಕೆಳಕಂಡಂತಿದೆ

ಸರ್ಕಾರಿ ಪ್ರೌಢ ಶಾಲೆ ಶ್ರೀಗಿರಿಪುರ	2
ಸರ್ಕಾರಿ ಪ್ರೌಢ ಶಾಲೆ ಅರಿಶಿನ ಕುಂಟೆ	2
ಸರ್ಕಾರಿ ಪ್ರೌಢ ಶಾಲೆ ತಿಪ್ಪಸಂದ್ರ	1
ಸರ್ಕಾರಿ ಪ್ರೌಢ ಶಾಲೆ ಮಂಚನಬೆಲೆ	1
ಸರ್ಕಾರಿ ಪ್ರೌಢ ಶಾಲೆ ಮಂಚನಬೆಲೆ	1
ಸರ್ಕಾರಿ ಪ್ರೌಢ ಶಾಲೆ ಕಲ್ಯಾಗೇಟ್	1
ಸರ್ಕಾರಿ ಪ್ರೌಢ ಶಾಲೆ ಸುಗ್ಗನಹಳ್ಳಿ	1

ಆ) ಸಾಮಾನ್ಯ ಶಿಕ್ಷಕರ ಹಾಗೂ ದೈಹಿಕ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಬೆಂಗಳೂರು ವಿಭಾಗದ ಸಹನಿರ್ದೇಶಕರು, ಆಯ್ಕೆ ಪಟ್ಟಿಯನ್ನು ಪ್ರಕಟಿಸಿದ್ದು ನೇಮಕಾತಿ ಆದೇಶಗಳನ್ನು ನೀಡಲು ಕ್ರಮ ತೆಗೆದುಕೊಂಡಿರುತ್ತಾರೆ. ವೃತ್ತಿ ಶಿಕ್ಷಕರ ಹುದ್ದೆಗಳನ್ನು ಮುಂದಿನ ನೇಮಕಾತಿಯಲ್ಲಿ ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

ಇ) ಈ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಈಗಾಗಲೇ ಕೈಗೊಂಡಿರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಅನುದಾನಿತ ಕಾನೂನು ಕಾಲೇಜುಗಳಿಗೆ 1996 ರ ಯು.ಜಿ.ಸಿ. ವೇತನ ವಿಸ್ತರಣೆ.

1788 - ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾಲೇಜು ಶಿಕ್ಷಣಾಲಯದಡಿಯಲ್ಲಿ ಬರುವ ಅನುದಾನಿತ ಕಾನೂನು ಕಾಲೇಜುಗಳಿಗೆ 1986ರ ಯು.ಜಿ.ಸಿ ವೇತನ ಅನ್ವಯವಾಗುವುದೇ? ಹಾಗಿದ್ದಲ್ಲಿ ಈ ಕಾಲೇಜುಗಳಿಗೆ ಇದುವರೆಗೆ ಏಕೆ ವಿಸ್ತರಣೆ ಮಾಡಿಲ್ಲ?

ಅ) ಅನ್ವಯವಾಗದಿದ್ದರೆ ಕೇವಲ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಶಿಕ್ಷಣ ಕಾಲೇಜುಗಳಿಗೆ ಮಾತ್ರ ವಿಸ್ತರಿಸಿ ಕಾನೂನು ಕಾಲೇಜುಗಳನ್ನು ಯುಜಿಸಿ ವೇತನ ಶ್ರೇಣಿಯಿಂದ ಹೊರಡಿಸುವ ತಾರತಮ್ಯಕ್ಕೆ ಕಾರಣವೇನು?

ಶ್ರೀ ಬಿ. ಸೋಮಶೇಖರ್ (ಉನ್ನತ ಶಿಕ್ಷಣ ಸಚಿವರು) :

ಅ) ಹೌದು, ಈ ಬಗ್ಗೆ ಕಾಲೇಜು ಶಿಕ್ಷಣ ಇಲಾಖೆ, ಆರ್ಥಿಕ ಇಲಾಖೆ ಹಾಗೂ ಯುಜಿಸಿಯೊಂದಿಗೆ ಸಮಾಲೋಚಿಸಲಾಗುತ್ತಿದೆ. ಆದ್ದರಿಂದ ವಿಳಂಬವಾಗಿದೆ.

ಆ) ಉದ್ಭವಿಸುವುದಿಲ್ಲ.

ನಿರ್ಮಲ ಗ್ರಾಮ ಯೋಜನೆ.

1789 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1996-97ನೇ ಸಾಲಿನ "ನಿರ್ಮಲ ಗ್ರಾಮ ಯೋಜನೆ" ಯಡಿಯಲ್ಲಿ ಎಷ್ಟು ಹಣವನ್ನು ನಿಗದಿಪಡಿಸಲಾಗಿತ್ತು?

ಆ) ಅದರಲ್ಲಿ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ. (ಪ್ರತಿಯೊಂದು ತಾಲ್ಲೂಕುವಾರು ಖರ್ಚು ಮಾಡಿದ ಹಣದ ವಿವರ ನೀಡುವುದು)

ಇ) ಸದರಿ ಸಾಲಿನಲ್ಲಿ ಈ ಯೋಜನೆಯಿಂದ ಲಾಭ ಪಡೆದುಕೊಂಡ ಫಲಾನುಭವಿಗಳ ಒಟ್ಟು ಸಂಖ್ಯೆ ಎಷ್ಟು ? (ಪ್ರತಿಯೊಂದು ತಾಲ್ಲೂಕುವಾರು ಹಾಗೂ ಪ್ರತಿಯೊಬ್ಬ ಫಲಾನುಭವಿಯ ಹೆಸರುಗಳೊಂದಿಗೆ ವಿವರಗಳನ್ನು ನೀಡುವುದು)

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) "ನಿರ್ಮಲ ಗ್ರಾಮ ಯೋಜನೆ"ಯಡಿ 1996-97ನೇ ಸಾಲಿಗೆ ರೂ.25.33 ಕೋಟಿ ಹಣವನ್ನು ನಿಗದಿಪಡಿಸಲಾಗಿತ್ತು.

ಆ) ಅದರಲ್ಲಿ ರೂ. 23.81 ಕೋಟಿ ಹಣವನ್ನು ವೆಚ್ಚ ಮಾಡಲಾಗಿದೆ. (ತಾಲ್ಲೂಕುವಾರು ವೆಚ್ಚದ ವಿವರಗಳನ್ನು ಅನುಬಂಧ -1ರಲ್ಲಿ ನೀಡಲಾಗಿದೆ)

ಇ) ಸದರಿ ಸಾಲಿನಲ್ಲಿ ಈ ಯೋಜನೆಯಿಂದ ಲಾಭ ಪಡೆದ ಫಲಾನುಭವಿಗಳ ಸಂಖ್ಯೆ 1,68,902 (ತಾಲ್ಲೂಕುವಾರು ಫಲಾನುಭವಿಗಳ ವಿವರಗಳನ್ನು ಅನುಬಂಧ -1ರಲ್ಲಿ ನೀಡಲಾಗಿದೆ).